**ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,**
**ಬನಹಟ್ಟಿ.**

**ಸಿಸಿ ನಂಃ 575/2025**
**ಸಿಡಬ್ಲ್ಯೂಃ 12 ಪಿಡಬ್ಲ್ಯೂಃ 9**

| | | |
|---|---|---|
| ಸಾಕ್ಷಿದಾರರ ಹೆಸರು | ಅಶೋಕ ಭೋವಿ | |
| ತಂದೆ/ಗಂಡನ ಹೆಸರು | ಶೇಷಗಿರಿ | |
| ವಯಸ್ಸು | 51 | ವರ್ಷ |
| ವಉದ್ಯೋಗ | ಕೂಲಿ | |
| ವಾಸಸ್ಥಳ | ಐನಾಪೂರ | |

**ಸಾಕ್ಷಿಯನ್ನು ಇಂದು ದಿನಾಂಕಃ 18-11-2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ**

ದಿಃ 20-07-2025 ರಂದು ಐನಾಪುರದಿಂದ ಐನಾಪೂರ ಸಂತೆಗೆ ನನ್ನ ಮೋಟಾರ ಸೈಕಲ ಸಂಖ್ಯೆಃ KA-23-EF-6197 ಮೇಲೆ ಹೋಗಿದ್ದೇನು. ನಂತರ ಐನಾಪುರದ ಚಾಲುಕ್ಯ ಬಾರ್ ಹತ್ತಿರ ನನ್ನ ಮೋಟಾರ ಸೈಕಲನ್ನು ನಿಲ್ಲಿಸಿ ಹೋಗಿದ್ದೆನು. ನಾನು ಸಂತೆ ಮುಗಿಸಿ ಬಂದು ನೋಡಿದಾಗ ನನ್ನ ಮೋಟಾರ ಸೈಕಲ ಸ್ಥಳದಲ್ಲಿ ಇರಲಿಲ್ಲ. ಎರಡು ಮೂರು ದಿನಗಳ ಕಾಲ ನಾನು ನನ್ನ ಮೋಟಾರ ಸೈಕಲನ್ನು ಹುಡುಕಾಡಿದೆನು. ದಿಃ12-04-2025 ರಂದು ನಾನು ಬನಹಟ್ಟಿ ಪೊಲೀಸ ಠಾಣೆಗೆ ಬಂದು ನೋಡಿಲಾಗಿ ನನ್ನ ಮೋಟಾರ ಸೈಕಲ ಜೊತಗೆ ಇನ್ನು 8 ಮೋಟಾರ ಸೈಕಲಗಳು ಇದ್ದವು. ನಂತರ ಬನಹಟ್ಟಿ ಪೊಲೀಸ ಠಾಣೆಯಲ್ಲಿ ನೋಡಿಕೊಂಡು ಹೋಗಿದ್ದೆನು. ನಂತರ ಈ ದಿನ ನನಗೆ ಸಾಕ್ಷಿ ನುಡಿಯಲು ಕರೆದಿರುತ್ತಾರೆ.

**(ಈ ಹಂತದಲ್ಲಿ ಎಪಿಪಿ ರವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು, ಆರೋಪಿತರ ವಕೀಲರ ತಕರಾರಿನ ಮೇರೆಗೆ )**

**ಪಾಟೀ ಸವಾಲು ಃ ಎಪಿಪಿ ರವರಿಂದ ಃ**

ದಿಃ 12-4-2025 ರಂದು ನನಗೆ ಈ ನ್ಯಾಯಾಲಯದು ಮುಂದಿರುವ ಆರೋಪಿತನಾದ ಮಹಾಂತೇ ಕಂಠೆಪ್ಪ ಬಿಸ್ತನ್ನವರನ್ನು ತೋರಿಸಿ ಈತನೇ ಕಳ್ಳತನ ಮಾಡಿದ ವ್ಯಕ್ತಿ ಎಂದು ತಿಳಿಸಿರುತಾರೆ ಎಂದರೆ ಹೌದು. ಆರೋಪಿತನು ರಬಕವಿ , ಮುಧೋಳ, ರಾಯಭಾಗ, ಜಮಖಂಢಿ ಅಥಣ,

ಐನಾಪೂರ, ಚಿಮ್ಮಡ ಮತ್ತು ಜತ್ ಊರುಗಳಲ್ಲಿ ಕಳ್ಳತನ ಮಾಡಿರುತ್ತಾರೆ ಎಂದು ತಿಳಿಸಿದರು ಎಂದರೆ ಹೌದು. ನಾನು ನ್ಯಾಯಾಲಯದಿಂದ ನನ್ನ ವಾಹನವನ್ನು ಬಿಡುಗಡೆಪಡಿಸಿಕೊಂಡು ಪೊಲೀಸ ಠಾಣೆಗೆ ಹೋಗಿ ನನ್ನ ವಾಹನವನ್ನು ಪಡೆದಿರುತ್ತೇನೆ ಎಂದರೆ ಹೌದು. ಆ ಸಮಯದಲ್ಲಿ ಪೊಲೀಸರು ಭಾವಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಹೌದು.

2. ಸಾಕ್ಷಿಯು ತನ್ನ ಮೋಟಾರ ಸೈಕಲ ಬಿಡುಗಡೆ ಕಾಲಕ್ಕೆತೆಗೆದ ಮೂರು ಭಾವಚಿತ್ರಗಳನ್ನು ನೇಡಿ ಗುರುತಿಸಿದ್ದು ಸದರಿಯವುಗಳನ್ನು ನಿಪಿ- 23 ರಿಂದ 25 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಾನು ನನ್ನ ವಾಹನದ ಆರ್.ಸಿ ಕಾರ್ಡ ಹಾಗೂ ವಿಮೆ ಪಾಲಿಸಿ ಪತ್ರಗಳನ್ನು ನೀಡಿರುತ್ತೇನೆ ಎಂದರೆ ಹೌದು. ನನ್ನ ವಾಹನ ಬಿಡುಗಡೆ ಆದ ನಂತರ ನನ್ನ ವಾಹನ ನನಗೆ ಮುಟ್ಟಿರುತ್ತದೆ ಎಂದು ನಾನು ಬರೆದುಕೊಟ್ಟಿರುತ್ತೇನೆ ಎಂದರೆ ಹೌದು. ಸಾಕ್ಷಿಯು ಸದರಿ ದಾಖಲಾತಿಯನ್ನು ಗುರುತಿಸಿದ್ದು , ಸದರಿಯವರು ನಿಪಿ-26 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-26 ಎ ಎಂದು ಗುರುತಿಸಲಾಯಿತು. ಈ ಕುರಿತು ಚಾಸಾ-1 ರವರು ದೂರನ್ನು ನೀಡಿರುತ್ತಾರೆ ಎಂದರೆ ಹೌದು.

**ಪಾಟೀ ಸವಾಲು :ಆರೋಪಿರ ಪರ ವಕೀಲರಿಂದಃ**

ನಿಪಿ-23 ಅನ್ನು ಸಾಕ್ಷಿಗೆ ತೋರಿಸಿಲಾಗಿ , ಸಾಕ್ಷಿಯು ಅದನ್ನು ನೋಡಿ ಮೋಟಾರ ಸೈಕಲ ವಾಹನದ ಸಂಖ್ಯೆ ಸದರಿ ಭಾವಚಿತ್ರದಲ್ಲಿ ಕಾಣುವುದಿಲ್ಲ ಎಂದು ನುಡಿಯುತ್ತಾರೆ . ಪೊಲೀಸರು ನಿಪಿ-23 ಅನ್ನು ಅವರ ಮೋಬೈಲನಿಂದ ತೆಗೆದುಕೊಂಡಿರುತ್ತಾರೆ. ನಿಪಿ-24 ಮತ್ತು 25 ರಲ್ಲಿಯೂ ಸಹಹ ನನ್ನ ಮೋಟಾರ ಸೈಕಲ ಸಂಖ್ಯೆ ಕಾಣಿಸುವುದಿಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

**ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬನಹಟ್ಟಿ**

**ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,**
**ಬನಹಟ್ಟಿ.**

ಸಿಸಿ ನಂಃ **575/2025**
ಸಿಡಬ್ಲ್ಯೂಃ **11** ಪಿಡಬ್ಲ್ಯೂಃ **8**

| | | |
|---|---|---|
| ಸಾಕ್ಷಿದಾರರ ಹೆಸರು | ನಿಂಗಪ್ಪ ಪೂಜಾರಿ | |
| ತಂದೆ/ಗಂಡನ ಹೆಸರು | ಶಿವರಾಯಪ್ಪ | |
| ವಯಸ್ಸು | 35 | ವರ್ಷ |
| ವಉದ್ಯೋಗ | ಒಕ್ಕಲುತನ | |
| ವಾಸಸ್ಥಳ | ರಬಕವಿ | |

ಸಾಕ್ಷಿಯನ್ನು ಇಂದು ದಿನಾಂಕಃ **18-11-2025** ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.
ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ

ಸುಮಾರು ಒಂದು ವರ್ಷದ ಹಿಂದೆ ಮೋಟಾರ್ ಸೈಕಲ್ ಸಂ KA-48-Y-1355 ನೇದ್ದನ್ನು ನಾನು ತೋಟದಿಂದ ರಬಕವಿ ಗ್ರಾಮಕ್ಕೆ ಮಧ್ಯಾಹ್ನ 1 ಗಂಟೆಗೆ ಬಂದಿದ್ದೆನು. ನಾನು ನನ್ನ ಮೋಟಾರ ಸೈಕಲನ್ನು ನಾಡಗೋಡ ದಾವಖಾನೆ ಹತ್ತಿರ  ಇರುವ ದರ್ಮಾನ ಶೆಡ್ ಹತ್ತಿರ ನಿಲ್ಲಿಸಿ ಮಾರ್ಕೆಟಿಗೆ ಹೋಗಿದ್ದೆನು. ಮಧ್ಯಾಹ್ನ 2 ಗಂಟೆಗೆ ವಾಪಸ್ಸು ಬಂದುನೋಡಲಾಗ ನನ್ನ ಮೋಟಾರ್ ಸೈಕಲ ಸ್ಥಳದಲ್ಲಿ ಇರಲಿಲ್ಲ. ನಂತರ ಎರಡು ಕಾಲ ನಾನು ನನ್ನ ಮೋಟಾರ್ ಸೈಕಲನ್ನು ಹುಡುಕಾಡಿದು ಸಿಕ್ಕರಲಿಲ್ಲ. ಒಂದು ವಾರದ ನಂತರ ಪೊಲೀಸರು ಬನಹಟ್ಟಿ ಪೊಲೀಸ ಠಾಣೆಗೆ ಕರೆದು ನನ್ನ ಮೋಟಾರ್ ಸೈಕಲ್ ಸಹಿತ 8 ಮೋಟಾರ್ ಸೈಕಲಗಳನ್ನು ತೋರಿಸಿರುತ್ತಾರೆ. ನಂತರ ನ್ಯಾಯಾಲಯಕ್ಕೆ ಹೋಗಿ ಸದರಿ ವಾಹನವನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿಕೊಂಡೆನು. ಈ ಕುರಿತು ಪೊಲೀಸರು ನನಗೆ ವಿಚಾರಣೆ ಮಾಡಿರುತ್ತಾರೆ.

2. ಸಾಕ್ಷಿಯು  ಮೋಟಾರ್ ಸೈಕಲ ಸಂಖ್ಯೆಃ KA-48-Y-1388 ನೇದ್ದನ್ನು ಬಿಡುಗಡೆ ಕಾಲಕ್ಕೆ ತೆಗೆದ 4 ಛಾಯಚಿತ್ರಗಳನ್ನು ನೋಡಿ ಗುರುತಿಸಿದ್ದು , ಸದರಿ ಛಾಯಾಚಿತ್ರಗಳನ್ನು ನಿಪಿ-19 ರಿಂದ 22 ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಮೋಟಾರ ಸೈಕಲಿಗೆ ಸಂಬಂಧಪಟ್ಟ ಆ.ಸಿ ಕಾರ್ಡ ಆಧಾರ ಕಾರ್ಡ ಹಾಗೂ ವಿಮೆ ಪಾಲಿಸಿಯನ್ನು ನೋಡಿ ಗುರುತಿಸಿರುತ್ತಾರೆ , ಆದರೆ ಸದರಿಯವರು ಜೆರಾಕ್ಸಪ್ರತಿಗಳು ಆಗಿದ್ದರಿಂದ ಅವುಗಳನ್ನು ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಎಪಿಪಿ ರವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು, ಆರೋಪಿತರ ವಕೀಲರ ತಕರಾರಿನ ಮೇರೆಗೆ )**

**<u>ಪಾಟೀ ಸವಾಲು : ಎಪಿಪಿ ರವರಿಂದ :</u>**

ದಿಃ 05-04-2025 ರಂದು ನಾನು ನನ್ನ ಮೋಟಾರ ಸೈಕಲನ್ನು ತೆಗೆದುಕೊಂಡು ರಬಕವಿ ಸಂತೆಗೆ ಹೋಗಿದ್ದೆನು ಅಂದರೆ ಹೌದು. ದಿಃ 12-04-2025 ರಂದು ನನ್ನ ಮೋಟಾರ ಸೈಕಲನೊಂದಿಗೆ ಇನ್ನು 8 ಮೋಟಾರ ಸೈಕಲಗಳು ಸಿಕ್ಕಿರುತ್ತವೆ ಎಂದು ಗೊತ್ತಾಯಿತು ಎಂದರೆ ಹೌದು. ಸದರಿ ಮೋಟಾರ ಸೈಕಲಗಳನ್ನು ಕಳ್ಳತನ ಮಾಡಿದ್ದ ವ್ಯಕ್ತಿ ಮಹಾಂತೇಶ ಕಂಠೆಪ್ಪ ಬಿಸ್ತನ್ನವರ ಅಂತ ತೋರಿಸಿರುತ್ತಾರೆ ಎಂದರೆ ಹೌದು. ಆರೋಪಿತನು ರಬಕವಿ , ಮುಧೋಳ, ರಾಯಭಾಗ, ಜಮಖಂಢಿ ಅಥಣ, ಐನಾಪೂರ, ಚಿಮ್ಮಡ ಮತ್ತು ಜತ್ ಊರುಗಳಲ್ಲಿ ಕಳ್ಳತನ ಮಾಡಿರುತ್ತಾರೆ ಎಂದು ತಿಳಿಸಿದರು ಎಂದರೆ ಹೌದು. ನ್ಯಾಯಾಲಯದ ಮುಂದಿರುವ ಆರೋಪಿತನೇ ಕಳ್ಳತನ ಮಾಡಿದ ಆರೋಪಿತನುಎಂದು ಠಾಣೆಯಲ್ಲಿ ನನಗೆ ತೋರಿಸಿದರು ಎಂದರೆ ಸಾಕ್ಷಿಯು ನನಗೆ ರಾತ್ರಿಯಾಗಿದ್ದರಿಂದ ಕತ್ತಲೆಯಲ್ಲಿ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ.

2. ನಾನು ಆರೋಪಿತನನ್ನು ಬೆಳಗಿನ ಜಾವದಲ್ಲಿ ನೋಡಿದ್ದರು , ಆರೋಪಿಗೆ ಸಹಾಯ ಮಾಡಲು ನಾನು ಆತನನ್ನು ಕತ್ತಲಲ್ಲಿ ನೋಡಿದ್ದೇನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು :ಆರೋಪಿರ ಪರ ವಕೀಲರಿಂದಃ</u>**

ಸಾಮಾನ್ಯವಾಗಿ ಮೋಟಾರ ಸೈಕಲನ್ನುತೆಗೆದುಕೊಂಡರೇ ಚಾಲನಾ ಪರವಾಣಗೆ ಕೊಡುತ್ತಾರೆ ಎಂದು ಹೌದು. ಅದರಂತೆ ಆರ್.ಸಿ ಬುಕ್ ಹಾಗೂ ವಿಮೆ ಪಾಲಿಸಿ ಇರುತ್ತದೆ ಎಂದರೆ ಹೌದು.

ನಾನು ನನ್ನ ಮೋಟಾರ ಸೈಕಲ ಕಳ್ಳತನ ಆಗಿರುತ್ತದೆ ಎಂದು ವೈಯಕ್ತಿಕವಾಗಿ ದೂರನ್ನುನೀಡಿರುವುದಿಲ್ಲ ಎಂದರೆ ಹೌದು. ಚಾಸಾ-1 ರವರು ದೂರನ್ನು ನೀಡಿದ್ದು ಆ ದೂರಿನ ಜೊತೆಗೆ ನಂದು ಸೇರಿಸಿರುತ್ತಾರೆ ಎಂದರೆ ಹೌದು. ಚಾಸಾ-1 ರವರ ಮೋಟಾರ ಸೈಕಲ ಕಳ್ಳತನವಾಗಿದೇ ಎಂಬ ಕಾರಣ ಕ್ಕೆ ನನ್ನದು ಮೋಟಾರ ಸೈಕಲ ಕಳ್ಳತನ ಆಗಿದೆ ಎಂದರೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೋಟಾರ ಸೈಕಲ ಸಿಲ್ವರ ಬಣ್ಣದು ಇರುತ್ತದೆ. ಚಾಸಾ-1 ರವರು ನೀಡಿದ ದೂರಿನಲ್ಲಿ ನನ್ನ ವಾಹನದ ಬಣ್ಣದ ಕುರಿತು ಬರೆಸಿರುವುದಿಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

**ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬನಹಟ್ಟಿ**

**ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,**
**ಬನಹಟ್ಟಿ.**

**ಸಿಸಿ ನಂಃ 575/2025**
**ಸಿಡಬ್ಲ್ಯೂಃ 8 ಪಿಡಬ್ಲ್ಯೂಃ 7**

| | |
|---|---|
| ಸಾಕ್ಷಿದಾರರ ಹೆಸರು | ಅವಿನಾಶ ನಾವಿ |
| ತಂದೆ/ಗಂಡನ ಹೆಸರು | ಚಂದ್ರಶೇಖರ |
| ವಯಸ್ಸು | 29 |
| ಉದ್ಯೋಗ | ಚಾಲಕ |
| ವಾಸಸ್ಥಳ | ಆಸಂಗಿ |

**ಸಾಕ್ಷಿಯನ್ನು ಇಂದು ದಿನಾಂಕಃ 18-11-2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ**

ನನಗೆ ಚಾಸಾ-1 ಮತ್ತು 9 ಪರಿಚಯ. ದಿಃ 24-03-2025 ರಂದು ಸಂಜೆ 7 ಗಂಟೆ ಸುಮಾರು ನಾನು, ಚಾಸಾ1 ಮತ್ತು ಚಾಸಾ-9 ರವರು ಸೇರಿ ಸ್ಪ್ಲೆಂಡರ್ ಮೋಟಾರ ಸಂಖ್ಯೆಃ KA-48-9423 ನೇದ್ದರ ಮೇಲೆ ಚಿಮ್ಮಡ ಗ್ರಾಮಕ್ಕೆ ಹೋಗಿದ್ದೆವು. ಚಿಮ್ಮಡ ಗ್ರಾಮದ ಪಿಕೆಪಿಎಸ್ ಹತ್ತಿರ ಹಾಲು ತುಂಬಿಕೊಂಡು ಬರಲು ಮೋಟಾರ ಸೈಕಲನ್ನು ನಿಲ್ಲಿಸಿ ಹೋಗಿದ್ದೆವು. ನಂತರ ಸಂಜೆ 9 ಗಂಟೆಗೆ ಮರಳಿ ಬಂದು ನೋಡಲಾಗಿ ಸ್ಥಳದಲ್ಲಿಸದರಿ ಮೋಟಾರ್ ಸೈಕಲ್ ಇರಲಿಲ್ಲ. ಸದರಿ ಮೋಟಾರ್ ಸೈಕಲನ್ನು ಮಹಾಲಿಂಗಪುರ, ಚಿಮ್ಮಢ ರಬಕವಿ , ರಾಂಪುರ ಕಡೆಯಲ್ಲ ಹುಡುಕಾಡಿದರು ಸಿಕ್ಕರಲಿಲ್ಲ. ಸದರಿ ಮೋಟಾರ ಸೈಕಲ ಕಳುವಾಗಿರುತ್ತದೆ ಎಂದು ತಿಳಿದು ಬಂತು.

2. ಈ ಕುರಿತು ಚಾಸಾ-1 ರವರು ಬನಹಟ್ಟಿ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿದರು. ಈ ಕುರಿತ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ.

3. ದಿಃ 12-04-2025 ರಂದು ಪೊಲೀಸರು ಬನಹಟ್ಟಿ ಪೊಲೀಸ ಠಾಣೆಗೆ ನನ್ನನ್ನು , ಚಾಸಾ-1 ಮತ್ತು 9 ರವರನ್ನು ಕರೆಯಿಸಿದ್ದರು. ಆಗ ಪೊಲೀಸರು ನಮ್ಮ ಕಳುವಾದ ಮೋಟಾರ್ ಸೈಕಲನ್ನು ಹಾಗೂ ಇತರೆ 8 ಮೋಟಾರ್ ಸೈಕಲಗಳನ್ನು ತೋರಿಸಿ ಸದರಿಯವುಗಳನ್ನು ಆರೋಪಿತನಾದ ಮಹಾಂತೇಶ ಕಂಠೆಪ್ಪ ಬಿಸ್ತನ್ನವರ ಕಳ್ಳತನ ಮಾಡಿರುತ್ತಾನೆ ಎಂದು ತಿಳಿಸಿದರು.

ಆರೋಪಿತನು ಆತನು ಜತ್ತ, ಐನಾಪೂರ, ಚಿಮ್ಮಡ ಊರುಗಳಲ್ಲಿ ಕೂಡ ಕಳ್ಳತನ ಮಾಡಿರುತ್ತಾರೆ ಎಂದು ತಿಳಿಸಿದರು.

4. ನ್ಯಾಯಾಲಯದ ಮುಂದಿರುವ ಆರೋಪತನನ್ನು ನಾನು ಗುರುತಿಸುತ್ತೇನೆ. ಚಾಸಾ-1 ರವರ ವಾಹನವನ್ನು ನೋಡಿದರೇ ಗುರುತಿಸುತ್ತೇನೆ.

5 .ಸಾಕ್ಷಿಯು ಮೋಟಾರ್ ಸೈಕಲ ಸಂಖ್ಯ: KA-48-X-9423 ನೇದ್ದನ್ನು ಬಿಡುಗಡೆ ಕಾಲಕ್ಕೆ ತೆಗೆದ 4 ಛಾಯಚಿತ್ರಗಳನ್ನು ನೋಡಿ ಗುರುತಿಸಿದ್ದು , ಸದರಿ ಛಾಯಾಚಿತ್ರಗಳನ್ನು ನಿಪಿ-15 ರಿಂದ 18 ಎಂದು ಗುರುತಿಸಲಾಯಿತು. ಸದರಿ ವಾಹನ ಗುರುತಿಸಿದರ ಕುರಿತು ಪೊಲೀಸರು ನನ್ನ ವಿಚಾರಿಸಿರುತ್ತಾರೆ.

<u>ಪಾಟೀ ಸವಾಲು :ಆರೋಪಿರ ಪರ ವಕೀಲರಿಂದಃ</u>

ನಾನು ಈ ದಿನ ಚಾಸಾ-1 ರವರ ಪರ ಸಾಕ್ಷಿ ನುಡಿಯಲು ಬಂದಿದ್ದೇನೆ. ಚಾಸಾ-1 ರವರು ನನಗೆ ಪರಿಚಯ ಎಂದರೆ ಹೌದು. ಸದರಿ ಮೋಟಾರ ಸೈಕಲನ್ನು ನಾವು ಚಿಮ್ಮಡದಲ್ಲಿರುವ ಪಿಕೆಪಿಎಸ್ ಸೊಸೈಟ ಹತ್ತಿರ ಇರುವ ವಾಟರ್ ಟಾಂಕ್ ಹತ್ತಿರ ನಿಲ್ಲಿಸಿ ಹೋಗಿದ್ದೆವು. ನಾವು ಒಂದೇ ಮೋಟಾರ ಸೈಕಲನ್ನು ನಿಲ್ಲಿಸಿ ಹೋಗಿದ್ದೆವು. ಸದರಿ ಮೋಟಾರ ಸೈಕಲ ಕೆಂಪು ಬಣ್ಣದಾಗಿದ್ದು ಚಾಸಾ-1 ರವರು ನೀಡಿದ ದೂರಿನಲ್ಲಿಯೂ ಸಹ ಕೆಂಪು ಬಣ್ಣದೆಂದು ಇರುತ್ತದೆ. ದಿಃ 24-03-2025 ರಿಂದ ದಿಃ10-04-2025 ರವರೆಗೂ ನಾವು ಸದರಿ ಮೋಟಾರ ಸೈಕಲನ್ನು ಹುಡುಕಾಡಿದೆವು. ಆರೋಪಿತನೇ ಕಳ್ಳತನ ಮಾಡಿರುತ್ತಾನೆ ಎಂದು ಪೊಲೀಸರೇ ತಿಳಿಸಿರುತ್ತಾರೆ. ಪೊಲೀಸರು 8 ವಾಹನಗಳನ್ನು ಸಹ ನಮಗೆ ಆರೋಪಿತು ಕಳ್ಳತನ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ.. ನಾವು ಸದರಿ ವಮೋಟಾರ ಸೈಕಲನ್ನು ನಿಲ್ಲಿಸಿದ ಸ್ಥಳವು ಸಾರ್ವಜನಿಕ ಸ್ಥಳವಾಗಿತ್ತು ಎಂದರೆ ಹೌದು. ನಮ್ಮ ಮೋಟಾರ ಸೈಕಲನ್ನು ಕಿಮ್ಮತ್ತು ಈಗ ರೂ. 40000/- ರಿಂದ 45000/- ಇರಬಹುದು. ನಿಪಿ-15 ಮತ್ತು 16 ಅನ್ನು ತೋರಿಸಿ ಸದರಿ ಭಾವಚಿತ್ರಗಳಲ್ಲಿ ಮೋಟಾರ ಸೈಕಲ ಸಂಖ್ಯೆ ಇದೇಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಅದನ್ನು ನೋಡಿ ಕಾಣುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಹಾಜುರಪಡಿಸಿದ ಛಾಯಾಚಿತ್ರಗಳನ್ನು ಪೊಲೀಸರು ಕ್ಯಾಮೆರಾದಿಂದ ತೆಗೆದಿರುತ್ತಾರೆ. ಸದರಿ 8 ವಾಹನಗಳ ಛಾಯಾಚಿತ್ರವನ್ನು ನಮಗೆ ಕೇವಲ ತೋರಿಸಿರುತ್ತಾರೆ , ಆದರೆ ನಮ್ಮ ಸಮಕ್ಷಮ ಅವುಗಳ ಭಾವಚಿತ್ರಗಳನ್ನು ತೆಗೆದಿರುವುದಿಲ್ಲ.

ಸದರಿ ಭಾವಚಿತ್ರಗಳನ್ನು ಪೊಲೀಸ ಠಾಣೆಯಲ್ಲಿ ತೆಗದಿರುತ್ತಾರೆ ಎಂದರೆ ಹೌದು. ನನಗೆ ಕನ್ನಡ ಓದಲು ಬರುತ್ತದೆ. ಚಾಸಾ-1 ರವರು ಪರಿಚಯ ಇದ್ದ ಕಾರಣ ಅವರಿಗೆ ಅನುಕೂಲವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

**ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬನಹಟ್ಟಿ**